**Com.O.S.** 32/2024

**PW**-1

**ಸಾಕ್ಷಿಯನ್ನು ದಿನಾಂಕ 10.3.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್.ಎಂ.ಬಿ.ಎನ್ ವಕೀಲರಿಂದಃ**

ಪ್ರತಿವಾದಿಗಳಿಗೆ ಸಾಲ ಮಂಜೂರು ಮಾಡುವ ಕಾಲಕ್ಕೆ ನಾನು ಬೈಲಕುಪ್ಪೆ ಶಾಖೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ನಿಜ. ಸಾಲ ಮಂಜೂರು ಮಾಡುವ ಕಾಲಕ್ಕೆ ಬೈಲಕುಪ್ಪೆ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದ ಮ್ಯಾನೇಜರ್ ಈಗ ಉತ್ತರಪ್ರದೇಶದಲ್ಲಿರುವ ಕಾರಣ ಅವರಿಗೆ ಸಾಕ್ಷಿ ಹೇಳಲು ಬರಲಾಗುವುದಿಲ್ಲ. ಪ್ರತಿವಾದಿಗಳ ಸಾಲದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ದಾಖಲೆ ನೋಡಿ ತಿಳಿದುಕೊಂಡಿದ್ದೇನೆ. ಪ್ರತಿವಾದಿಗಳಿಗೆ ಸಾಲ ಮಂಜೂರು ಮಾಡುವ ಕಾಲಕ್ಕೆ ಯಾವುದೇ ಆಸ್ತಿಯನ್ನು ಮಾರ್ಟಗೇಜ್ ಆಗಿ ಪಡೆಯದ ಕಾರಣ ಲೀಗಲ್ ಒಪಿನಿಯನ್ ಪಡೆದಿಲ್ಲ. ನನಗೆ ವಾದಿ ಸಂಸ್ಥೆಯ ಪರವಾಗಿ ಸಾಕ್ಷಿ ನುಡಿಯಲು ಜಿ.ಪಿ.ಎ ನೀಡಲಾಗಿದೆ, ಅದನ್ನು ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಸಾಲ ಮಂಜೂರು ಮಾಡುವ ಕಾಲಕ್ಕೆ ಪ್ರತಿವಾದಿಗಳಿಗೆ ಬಡ್ಡಿ ಹಾಗೂ ಇತರೆ ಚಾರ್ಜಗಳ ಬಗ್ಗೆ ತಿಳಿಸಿದ್ದೇವೆ. ಪ್ರತಿವಾದಿಗಳ ಖಾತೆಯನ್ನು ಎನ್.ಪಿ.ಎ ಎಂದು ಘೋಷಿಸುವ ಮೊದಲು ಪ್ರತಿವಾದಿ ಸಂಸ್ಥೆಗೆ ಭೇಟಿ ನೀಡಿದ್ದೇವೆ, ಆದರೆ ನೋಟಿಸ್ ನೀಡಿಲ್ಲ. ದಿನಾಂಕ 29.10.2022 ರಂದು ಮತ್ತು ಅದಕ್ಕೂ ಮೊದಲು ಸಹ ನಾವು ಪ್ರತಿವಾದಿ ಸಂಸ್ಥೆಗೆ ಭೇಟಿ ನೀಡಿದ್ದೇವೆ. ಆ ಕಾಲಕ್ಕೆ ನಾನು ಬೈಲಕುಪ್ಪೆಯ ಶಾಖೆಯಲ್ಲಿ ಇರಲಿಲ್ಲವಾದ್ದರಿಂದ ಆಗಿನ ಮ್ಯಾನೇಜರ್ ಪ್ರತಿವಾದಿ ಸಂಸ್ಥೆಗೆ ಭೇಟಿ ನೀಡಿದ್ದೇವೆ. ಆ ರೀತಿ ಭೇಟಿ ನೀಡಿದ ಬಗ್ಗೆ ವಾದಪತ್ರ ಮತ್ತು ನನ್ನ ಸಾಕ್ಷಿ ಹೇಳಿಕೆಯಲ್ಲಿ

ನಮೂದಿಲ್ಲ. ಎನ್.ಪಿ.ಎ ಎಂದು ಘೋಷಿಸುವ ಮೊದಲು ಸಾಲ ಪಡೆದ ವ್ಯಕ್ತಿಗೆ ನೋಟಿಸ್ ನೀಡುವುದು ಕಡ್ಡಾಯ ಎಂದರೆ ಸರಿಯಲ್ಲ. ಎಂ.ಎಸ್.ಎಂ.ಇ ಸಾಲ ಮರುಪಾವತಿ ಮಾಡಲು ತಡವಾದಾಗ ಸಾಲದ ನವೀಕರಣಕ್ಕೆ ಅವಕಾಶ ನೀಡುವುದು ಕಡ್ಡಾಯ ಎಂದರೆ ಸರಿಯಲ್ಲ. ಎಂ.ಎಸ್.ಎಂ.ಇ ಸಾಲಗಳಲ್ಲಿ 3 ನೇ ಗ್ಯಾರಂಟರ್ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. 2019 ರಲ್ಲಿ ಕೋವಿಡ್–19 ಅನ್ವಯ ಆರ್.ಬಿ.ಐ ಹೊರಡಿಸಿದ್ದ ಆದೇಶದ ಪ್ರಕಾರ ಪ್ರತಿವಾದಿಗಳ ಬಡ್ಡಿಯಲ್ಲಿ ಕಡಿತ ಮಾಡಿದ್ದೀರಾ ಎಂದರೆ ಇಲ್ಲ. ನಿಪಿ4 ಮತ್ತು 5 ರಲ್ಲಿನ ವಿಷಯಗಳನ್ನು ಪ್ರತಿವಾದಿಗಳಿಗೆ ತಿಳಿಸದೇ ಅವರ ಸಹಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ಲೀಗಲ್ ನೋಟಿಸ್ ಪ್ರತಿವಾದಿಗಳಿಗೆ ತಲುಪಿಲ್ಲ ಎಂದರೆ ನಾವು ಸರಿಯಾದ ವಿಳಾಸಕ್ಕೆ ಕಳುಹಿಸಿದ್ದೇವೆ. ನೋಟಿಸಿನಲ್ಲಿ ಪ್ರತಿವಾದಿಗಳ ಸಾಲವನ್ನು ಎನ್.ಪಿ.ಎ ಎಂದು ಘೋಷಿಸಿರುವ ಬಗ್ಗೆ ನಮೂದಿಲ್ಲ ಎಂದರೆ ಎನ್.ಪಿ.ಎ ಎಂಬ ಶಬ್ದ ನಮೂದಿಲ್ಲ, ಆದರೆ ಅವರು ಸಾಲವನ್ನು ಸರಿಯಾಗಿ ಪಾವತಿ ಮಾಡದಿರುವ ಬಗ್ಗೆ ನಮೂದಿದೆ. ಜಿ.ಪಿ.ಎ ಹಾಜರುಪಡಿಸದಿರುವ ಕಾರಣ ನಾನು ಹೇಳಿರುವ ಸಾಕ್ಷಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಜಿ.ಪಿ.ಎ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಾವು ಆರ್.ಬಿ.ಐ ನಿಯಮಗಳನ್ನು ಪಾಲಿಸಿಲ್ಲವಾದ್ದರಿಂದ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು